**<u>1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ</u>**

**ಸಿ.ಸಿ ಸಂಖ್ಯೆಃ 166/2023**

**ಸಿ.ಡಬ್ಲ್ಯೂ-8 ಪಿ.ಡಬ್ಲ್ಯೂ-6**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಜಿ.ವಿ. ವೆಂಕಟೇಶಪ್ಪ** |
| **ತಂದೆಯ ಹೆಸರು** | **:** | **ವೆಂಕಟರಮಣಪ್ಪ** |
| **ವಯಸ್ಸು** | **:** | **54 ವರ್ಷ** |
| **ಉದ್ಯೋಗ** | **:** | **ಪೊಲೀಸ್ ಮುಖ್ಯ ಪೇದೆ, ಬಾಂಬ್ ನಿಷ್ಕ್ರಿಯ ದಳ** |
| **ವಾಸ** | **:** | **ಬೆಂಗಳೂರು** |

**ಪ್ರಮಾಣೀಕರಿಸಿದ ದಿನಾಂಕ :13.07.2026.**

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

1. ನಾನು ಬೆಂಗಳೂರಿನ ಬಾಂಬ್ ನಿಷ್ಕ್ರಿಯ ದಳದಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ01.11.2020 ರಾಜ್ಯದ ಅಪರ ಪೊಲೀಸ್ ಮಹಾ ನಿರ್ದೇಶಕರವರು ಸಾಗರದ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜಪ್ತುಪಡಿಸಿಕೊಂಡಿರುವ ಸ್ಫೋಟಕಗಳನ್ನು ನಾಶಪಡಿಸುವಂತೆ ಲಿಖಿತ ಆದೇಶವನ್ನು ನೀಡಿದರು. ಸದರಿ ರವರ ಆದೇಶದ ಮೇರೆಗೆ ನಾನು ದಿಃ04.11.2020 ರಂದು ಸಾಗರಕ್ಕೆ ಬಂದು ಸಾಗರ ಗ್ರಾಮಾಂತರ ಪೊಲೀಸರು ಜಪ್ತುಪಡಿಸಿಕೊಂಡ ಸ್ಫೋಟಕಗಳನ್ನು ಠಾಣೆಯಿಂದ 5 ಕಿ ಮೀ ವ್ಯಾಪ್ತಿಯಲ್ಲಿರುವ ವರದಹಳ್ಳಿಯಲ್ಲಿ ಸದರಿ ಸ್ಫೋಟಕಗಳನ್ನು ಬೆಂಕಿ ಇಟ್ಟು ಪರಿಸರಿಕ್ಕೆ ಮತ್ತು ಸಾರ್ವಜನಿಕರಿಗೆ ಹಾನಿಯಾಗದ ಸ್ಥಳದಲ್ಲಿ ನಾಶಪಡಿಸಿದೆವು. ನಾಶಪಡಿಸುವ ಮೊದಲು ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಕಾಯ್ದಿರಿಸಿದೆವು. ನಾಶಪಡಿಸಿರುವುದಕ್ಕೆ ಸಂಬಂಧಿಸಿದ ವರದಿಯನ್ನು ಚಾಸ 16 ರವರಿಗೆ ನೀಡಿದೆವು.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಐ.ಎನ್.ಎಸ್. ವಕೀಲರಿಂದ</u>

1. ನಾವು ಸ್ಫೋಟಕಗಳನ್ನು ನಾಶಪಡಿಸಿದ ಜಾಗ ಸರ್ಕಾರಿ ಜಾಗವಾಗಿರುತ್ತದೆ. ಸ್ಫೋಟಕಗಳನ್ನು ನಾಶಪಡಿಸಲು ಠಾಣೆಯ ಪೊಲೀಸರು ಸ್ಥಳವನ್ನು ತೋರಿಸಿದರು. ದಾಖಲೆಗಳನ್ನು ಪರಿಶೀಲಿಸಿದ ನಂತರವೇ ನಾವು ಸ್ಫೋಟಕಗಳನ್ನು ನಾಶಪಡಿಸುತ್ತೇವೆ.

ಸ್ಫೋಟಕಗಳನ್ನು ನಾಶಪಡಿಸಿದ ಜಾಗದಲ್ಲಿ ನಾಶಪಡಿಸಲು ತಹಶೀಲ್ದಾರ್ ರವರು ಅನುಮತಿ ನೀಡಿರುವುದಕ್ಕೆ ಸಂಬಂಧಿಸಿದ ದಾಖಲೆಯನ್ನುನೋಡಿರುವುದಿಲ್ಲ. ನಾನು ಯಾವುದೇ ಸ್ಫೋಟಕಗಳನ್ನು ನಾಶಪಡಿಸದೇ ಇದ್ದರೂ ನಾಶಪಡಿಸಿದ್ದೇವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

**ಓದಿ ಹೇಳಿ ಕೇಳಿ ಸರಿ ಇದೆ**

**1** ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.